## ಭಾಗ - 1

ಮತ್ತೆ ಭಾನುವಾರ ಬಂದಿತು. ಕಾರ್ಖಾನೆಯಿಂದ ಸಂಜೆ ಬಂದು ಮಲಗಿದ್ದೆ. ಫೋನು ರಿಂಗಾಯಿತು. ಬಂದ ಕರೆ ಹೋದ ವಾರ ನಮ್ಮ ಅಪಾರ್ಟ್‌ಮೆಂಟಿನ ಬಳಿಯೇ ಇದ್ದ ಬಾರೊಂದರಲ್ಲಿ ಪರಿಚಯವಾಗಿದ್ದ ಪ್ರೊಫೆಸರ್ ಸ್ವಾಮಿನಾಥರದ್ದು. "ಗುಡ್ ಇವೆನಿಂಗ್ ಸರ್..." ಎಂದೆ. "ಗುಡ್ ಇವೆನಿಂಗ್ ವಿಶಾಲ್... ಕ್ಯಾನ್ ವಿ ಮೀಟ್ ಟುಡೇ ಇನ್ ದಿ ಸೇಮ್ ಬಾರ್... ನಿಮ್ಮ ಹತ್ರ ತುಂಬಾ ಮಾತನಾಡೋದಿದೆ..." ಅದೇ ಮೃದುವಾದ ಧ್ವನಿ. ''ಓಕೆ ಸರ್... ಎಷ್ಟು ಗಂಟೆಗೆ ಬರಬೇಕು..." ಎಂದು ಕೇಳಿದೆ. ''ಆಸ್ ಅರ್ಲೀ ಅಸ್ ಪಾಸಿಬಲ್... ನಾನು ಆಗಲೇ ಹೊರಟಿದ್ದೀನಿ..." ಎಂದು ಅವಸರಿಸಿದರು. ''ಓಕೆ ಸರ್... ಟೆನ್ ಮಿನಿಟ್ಸ್ ಬಂದುಬಿಡ್ತೀನಿ..." ಎಂದು ಹಾಸಿಗೆಯಿಂದ ಎದ್ದೆ.

ನಾನು ಬಾರಿನ ಒಳಗೆ ಹೋದಾಗ ನಾವು ಹೋದ ವಾರ ಕುಳಿತಿದ್ದ ಜಾಗದಲ್ಲಿಯೇ ಪ್ರೊಫೆಸರರು ಕುಳಿತು ಆಗಲೇ ವಿಸ್ಕಿಯನ್ನು ಹೀರುತಿದ್ದರು. ನನಗಾಗಿ ಬಿಯರ್ ಬಾಟಲು ಸಿದ್ಧವಾಗಿತ್ತು. ''ಪ್ಲೀಸ್ ಕಮ್ ವಿಶಾಲ್..." ಎಂದು ಎದ್ದು ನಿಂತು ಕೈಕುಲುಕಿ ಸ್ವಾಗತಿಸಿದರು. ನಾನು ಚಿಯರ್ಸ್ ಹೇಳಿ ಬಿಯರ್ ಸಿಪ್ ಮಾಡಿದೆ. ಪ್ರೊಫೆಸರರು ಯಾಕೋ ಏನೋ ತುಸು ಆತಂಕದಲ್ಲಿದ್ದಂತೆ ಕಂಡರು. ವಿಸ್ಕಿಯನ್ನು ಸುರಿದುಕೊಂಡು ಗಟಗಟನೆ ಕುಡಿಯತೊಡಗಿದರು. ಒಂದಾದ ಮೇಲಂತೆ ಒಂದು ಸಿಗರೇಟು ಹಚ್ಚುತ್ತಿದ್ದರು. ನಾನು ಅವರು ಸ್ವಲ್ಪ ಶಾಂತವಾಗಲಿ ಎಂದು ಮೌನವಹಿಸಿದೆ.

"ವಿಶಾಲ್... ನಿಮ್ಮಿಂದ ನನಗೊಂದು ಬಹಳ ಮುಖ್ಯವಾದ ಸಹಾಯ ಆಗಬೇಕಿದೆ..." ಎಂದು ನನ್ನನ್ನೇ ಎವೆಯಿಕ್ಕದೆ ನೋಡತೊಡಗಿದರು. ವಿಷಯವೇನೆಂದು ತಿಳಿಯದೇ ಕಕ್ಕಾಬಿಕ್ಕಿಯಾಗಿದ್ದರೂ ನಾನು "ಅದಕ್ಕೇನಂತೆ ಸರ್... ಹೇಳಿ... ಖಂಡಿತ ಮಾಡೋಣ..." ಎಂದು ಸಕಾರಾತ್ಮಕ ಉತ್ತರ ನೀಡಿದೆ. ಪ್ರೊಫೆಸರರು ತುಸು ನಿರಾಳವಾದಂತೆ ಕಂಡರು.

"ನಾನು ಇಪ್ಪತ್ತೈದು ವರ್ಷಗಳ ಹಿಂದೆ ಮದ್ರಾಸಿನ ಐಐಟಿಯ ರೋಬೋಟಿಕ್ಸ್ ಪ್ರಯೋಗಾಲಯದಲ್ಲಿ ಪ್ರೊಫೆಸರನಾಗಿ ಕೆಲಸ ಮಾಡುತಿದ್ದೆ. ನನ್ನ ವೈವಾಹಿಕ ಜೀವನ ಗೊತ್ತುಗುರಿಯಿಲ್ಲದ ದೋಣಿಯಂತಾಗಿತ್ತು. ನನ್ನ ಹೆಂಡತಿ ಆಗರ್ಭ ಶ್ರೀಮಂತರ ಮಗಳು. ನಾನು ಪ್ರಯೋಗಾಲಯದಲ್ಲಿ ನಿಷ್ಠೆಯಿಂದ ಕೆಲಸ ಮಾಡಿ ತರುತಿದ್ದ ಸಂಬಳ ಅವಳಿಗೆ ಕಾಲಕಸವಾಗಿತ್ತು. ಅವಳ ಬಯಕೆಗಳು, ಜೀವನ ಶೈಲಿ ಎಲ್ಲವೂ ನನಗೆ ತದ್ವಿರುದ್ಧವಾಗಿದ್ದವು. ನನ್ನದು ಸರಳ ಜೀವನ. ಅವಳದ್ದು ಆಡಂಬರದ ತೋರಿಕೆಯ ಜೀವನ. ಪ್ರತಿಯೊಂದಕ್ಕೂ ನಮ್ಮಿಬ್ಬರ ನಡುವೆ ಜಗಳ ಶುರುವಾಗುತ್ತಿತ್ತು. ನಾವು ಮದುವೆಯಾದ ಎರಡು ವರ್ಷಕ್ಕೆ ಮಗಳೊಬ್ಬಳು ಹುಟ್ಟಿದಳು. ನಾವಿದ್ದ ಮೂರು ಜನಕ್ಕೆ ಮನೆಯಲ್ಲಿ ಕೆಲಸ ಮಾಡಲು ಎರಡು ಆಳುಗಳು. ನಾವು ವಾಸವಿದ್ದ ನಮ್ಮ ಕ್ಯಾಂಪಸ್ಸಿನ ಕ್ವಾಟ್ರಸ್ಸಿನ ತುಂಬಾ ತುಂಬಲಾರದಷ್ಟು ವಸ್ತುಗಳು. ಕಷ್ಟಪಟ್ಟು ಕೆಲಸ ಮಾಡುವ ನನ್ನ ಗುಣವನ್ನು ಮತ್ತು ಬುದ್ಧಿಮತ್ತೆಯನ್ನು ಅವಳು ಎಂದೂ ಬೆಂಬಲಿಸಲಿಲ್ಲ..." ಎಂದು ಹೇಳಿ ಎತ್ತಲೋ ಒಮ್ಮೆ ನೋಡಿ ಲೋಟದಲ್ಲಿದ್ದ ವಿಸ್ಕಿಯನ್ನು ಕುಡಿದು ಮುಂದುವರಿಸಿದರು. ನಾನು ಕೇಳತೊಡಗಿದ್ದೆ.

"ನಮ್ಮಿಬ್ಬರ ನಡುವಿನ ದೈಹಿಕ ಮಿಲನವೂ ಯಾಂತ್ರಿಕವಾಗಿತ್ತು. ಅದೊಂದು ದಾಂಪತ್ಯದ ಅತ್ಯಂತ ಮೂಲಭೂತ ಅವಶ್ಯಕತೆಯೆಂದು ಅವಳು ತಿಳಿಯಲೇ ಇಲ್ಲ. ಅದು ನನಗೆ ಮಾಡುತ್ತಿರುವ ಉಪಕಾರವೆಂದೇ ಅವಳು ತಿಳಿದಿದ್ದಳು..." ಪ್ರೊಫೆಸರರು ನಿಟ್ಟುಸಿರುಬಿಟ್ಟು ಒಂದು ಕ್ಷಣ ಸುಮ್ಮನೆ ಕುಳಿತರು.

"ಎಲ್ಲವನ್ನೂ ಬೇರೊಬ್ಬ ಶ್ರೀಮಂತರ ಜೀವನಶೈಲಿಯೊಂದಿಗೆ ಹೋಲಿಕೆ ಮಾಡತೊಡಗಿದ್ದಳು. ನನ್ನನ್ನು ಕೆಲಸಕ್ಕೆ ಬಾರದವನೆಂದು ನಿಂದಿಸುತ್ತಿದ್ದಳು. ನಾನು ತೀವ್ರ ನಿರಾಶನಾಗಿಬಿಟ್ಟೆ. ಮದ್ಯಕ್ಕೆ